**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

**ಸಂಖ್ಯೆ:ಸಿ4(2):ಪ್ರೌಶಿಜೇಪಟ್ಟಿ:12:2010-11** **ದಿನಾಂಕ:12-02-2013**

## ಸುತ್ತೋಲೆ

ವಿಷಯ:ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2, ದಿನಾಂಕ:01-01-2008 ರಿಂದ 31-12-2010 ರವರೆಗೆ ಅಂತಿಮಗೊಳಿಸುವ ಬಗ್ಗೆ ಹಾಗೂ 31-12-2007 ರ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಪ್ರಕರಣಗಳನ್ನು ಸೇರ್ಪಡೆ ಮಾಡಿ ಅಂತಿಮ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: DPAR 59 SRE 2002: 24-06-2003
2) ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು-1957
3) ಈ ಕಛೇರಿಯ ಅಧಿಸೂಚನೆ ದಿನಾಂಕ:12:2010-11 ದಿ:23-01-2012
4) ಈ ಕಛೇರಿಯ ಸಮಸಂಖ್ಯೆ ಜ್ಞಾಪನಾ' ದಿನಾಂಕ:29-08-2012
5) ಈ ಕಛೇರಿಯ ಸಮಸಂಖ್ಯೆ ಜ್ಞಾಪನಾ ದಿನಾಂಕ:20-10-2012
6) ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ:17-12-2012
7) ಜಿಲ್ಲಾ ಉಪನಿರ್ದೇಶಕರುಗಳು ಸಲ್ಲಿಸಿರುವ ಜೇಷ್ಠತಾ ಪಟ್ಟಿಗಳು

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರೌಢಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ಉಲ್ಲೇಖಿತ ಸರ್ಕಾರದ ಅಧಿಸೂಚನೆಯನ್ವಯ ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರ **ನೇಮಕಾತಿ ಪ್ರಾಧಿಕಾರ** ಜಿಲ್ಲಾ ಉಪನಿರ್ದೇಶಕರಾಗಿರುವುದರಿಂದ, ದಿನಾಂಕ: 01-01-2008 ರಿಂದ 31-12-2010 ರವರೆಗೆ ನೇಮಕಾತಿ ಮತ್ತು ಬಡ್ತಿ ಪಡೆದು ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಗ್ರೇಡ್-2 ಜೇಷ್ಠತಾ ಪಟ್ಟಿಯನ್ನು **"ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು-1957 ರ ನಿಯಮ-10"** ರಂತೆ ಸಿದ್ಧಪಡಿಸಿ ಸಲ್ಲಿಸಿದ ಮೇರೆಗೆ ಉಲ್ಲೇಖ (3)ರ ಈ ಕಛೇರಿಯ ಅಧಿಸೂಚನೆ ದಿನಾಂಕ:23-01-2012 ರಂತೆ ಪ್ರಕಟಿಸಲಾಗದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (4) ರ ಸುತ್ತೋಲೆಯಂತೆ ದಿನಾಂಕ:31-01-2013 ರೊಳಗೆ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುತ್ತದೆಂದು ತಿಳಿಸಲಾಗಿತ್ತು.

ಮುಂದುವರೆದು ಉಲ್ಲೇಖ (6) ರ ಸುತ್ತೋಲೆಯಂತೆ ಪ್ರತಿ ಜಿಲ್ಲೆಗೆ ದಿನಾಂಕ ನಿಗದಿಪಡಿಸಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಶಿಕ್ಷಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ , ಶಿಕ್ಷಕರುಗಳ ಸೇವಾ ವಿವರಗಳನ್ನು ಅವ್ರ ಸೇವಾ ಪುಸ್ತಕದೊಂದಿಗೆ ಪರಿಶೀಲಿಸಿ, ಬಿಟ್ಟು ಹೋಗಿರುವ ಹಾಗೂ ಹೊಸದಾಗಿ ಸೇರ್ಪಡೆ ಮಾಡಬೇಕಾಗಿರುವ (ಬಡ್ತಿ, ಅಂತರ ಜಿಲ್ಲೆ/ವಿಭಾಗ ವರ್ಗಾವಣೆ) ಪಟ್ಟಿಯನ್ನು ಈ ಕಛೇರಿಗೆ ಖುದ್ದು ಹಾಜರಾಗಿ ಸಲ್ಲಿಸವಂತೆ ಸೂಚನೆ ನೀಡಲಾಗಿತ್ತು. ಆದರೆ ಕೆಲವೊಂದು ಜಿಲ್ಲೆಗಳು ಅವರಿಗೆ ನಿಗದಿಪಡಿಸಿರುವ ದಿನಾಂಕಗಳಂದು ತಾಂತ್ರಿಕ ಕಾರಣಗಳಿಂದ ಆಯುಕ್ತಾಲಯಕ್ಕೆ ಹಾಜರಾಗಿ ಮಾಹಿತಿಯನ್ನು ಸಲ್ಲಿಸಲು ಸಾಧ್ಯವಾಗದ ಪ್ರಯುಕ್ತ ನಿಗದಿತ ಅವಧಿಯಲ್ಲಿ ಜೇಷ್ಠತಾ ಪಟ್ಟಿಯನ್ನು ಸಂಯುಕ್ತೀಕರಿಸಿ ಪರಿಶೀಲನೆ ಮಾಡಿ ಅಂತಿಮಗೊಳಿಸಲು ಸಾಧ್ಯವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ , ಈ ಕಛೇರಿಗೆ ಉಪನಿರ್ದೇಶಕರು ಅಂತಿಮಗೊಳಿಸಿದ ಜೇಷ್ಠತಾ ಪಟ್ಟಿಯನ್ನು ಸಲ್ಲಿಸಿದ ನಂತರವೂ ಸಹ ಶಿಕ್ಷಕರಿಂದ ನೇರವಾಗಿ ಈ ಕಛೇರಿಗೆ ಮನವಿಗಳು ಬರುತ್ತಿರುವುದು ಗಮನಿಸಲಾಗಿದ್ದು, ಜೇಷ್ಠತಾ ಪಟ್ಟಿಯಲ್ಲಿ ಪದೇ ಪದೇ ಉಪಜೇಷ್ಠತಾ ಸಂಖ್ಯೆ ನೀಡುವುದನ್ನು ನಿಯಂತ್ರಿಸಲು ಹಾಗೂ ಪ್ರಸ್ತುತ ಉಪನಿರ್ದೇಶಕರು ಸಲ್ಲಿಸಿರುವ ಜೇಷ್ಠತಾ ಪಟ್ಟಿಯಲ್ಲಿ ಕೆಲವು ಜಿಲ್ಲೆಗಳಲ್ಲಿ ಶಿಕ್ಷಕರು ಪಡೆದಿರುವ ಉನ್ನತ ವ್ಯಾಸಂಗ ವಿದ್ಯಾರ್ಹತೆಯ ಮಾಹಿತಿಯನ್ನು ದಾಖಲಿಸದ ಕಾರಣ, ಉಪನ್ಯಾಸಕರಾಗಿ ಬಡ್ತಿ ನೀಡುವ ಬಗ್ಗೆ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಜೇಷ್ಠತಾ ಪಟ್ಟಿಯನ್ನು ಕಳುಹಿಸಿ ಕೊಡಲು ಸಾದ್ಯವಾಗಿರುವುದಿಲ್ಲ. ಆದುದರಿಂದ ಜೇಷ್ಠತಾ ಪಟ್ಟಿಯಲ್ಲಿನ ಅಂಶಗಳಿಗೆ / ವಿವರಗಳಿಗೆ ಆಕ್ಷೇಪಣೆಯನ್ನು ನೀಡಲು ಮತ್ತೊಂದು ಸಲ ಅವಕಾಶ ನೀಡಿ ಯಾವುದೇ ಓರ್ವ ಶಿಕ್ಷಕರು ಜೇಷ್ಠತಾ ಪಟ್ಟಿಯಿಂದ ಕೈಬಿಡದಂತೆ ಎಚ್ಚರ ವಹಿಸುವ ಸಲುವಾಗಿ ದಿನಾಂಕ:01-01-2008 ರಿಂದ 31-12-2010 ರವರೆಗೆ ಹಾಗೂ ದಿನಾಂಕ: 31-12-2007 ರಲ್ಲಿ ಅಂತಿಮಗೊಳಿಸಲಾದ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಪ್ರಕರಣಗಳನ್ನು ಉಪನಿರ್ದೇಶಕರು ಉಲ್ಲೇಖ (7) ರಂತೆ ಸಲ್ಲಿಸಿರುವ ಜೇಷ್ಠತಾ ಪಟ್ಟಿಗಳನ್ನು ಮತ್ತೊಮ್ಮೆ ಪರಿಶೀಲಿಸಿ ಅಂತಿಮಗೊಳಿಸಲು ನಿರ್ಧರಿಸಲಾಗಿದೆ.

**ಭಾಗ-1 (01-01-2008 ರಿಂದ 31-12-2010) ರವರೆಗಿನ ತಾತ್ಕಾಲಿಕ ಪಟ್ಟಿಯನ್ನು ಅಂತಿಮಗೊಳಿಸುವ ಷೆಡ್ಯೂಲ್**

| ಕ್ರ.ಸಂ | ವಿವರಗಳು | ದಿನಾಂಕ | ಜವಾಬ್ದಾರಿ |
|---|---|---|---|
| 1 | ಈಗಾಗಲೇ ಸಂಯುಕ್ತೀಕರಿಸಿ ಪ್ರಕಟಿಸಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿ ಹಾಗೂ ಪ್ರಸ್ತುತ ಜಿಲ್ಲಾ ಉಪನಿರ್ದೇಶಕರು ಅಂತಿಮಗೊಳಿಸಿ ಸಲ್ಲಿಸಿರುವ ದಿ:01-01-08 ರಿಂದ 31-12-10 ರವರೆಗಿನ ಜೇಷ್ಠತಾ ಪಟ್ಟಿಗೆ ಆಯುಕ್ತರ ಕಛೇರಿಯಿಂದ ಎರಡನೇ ಪರಿಷ್ಕೃತ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸುವುದು & ಉಪನಿರ್ದೇಶಕರಿಗೆ ಇ-ಮೇಲ್ ಮೂಲಕ ಕಳುಹಿಸುವುದು. | 15-02-2013 | ನಿರ್ದೇಶಕರು(ಪ್ರೌಢಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು |
| 2 | ಎರಡನೇ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಹಾಗೂ ಪತ್ರಿಕಾ ಪ್ರಕಟಣೆ ನೀಡುವುದು. | 18-02-2013 | ನಿರ್ದೇಶಕರು(ಪ್ರೌಢಶಿಕ್ಷಣ) ಆಯುಕ್ತರ ಕಛೇರಿ |
| 3 | ಈ ಎರಡನೇ ತಾತ್ಕಾಲಿಕ ಪರಿಷ್ಕೃತ ಪಟ್ಟಿಯನ್ನು ಜಿಲ್ಲಾ/ಬ್ಲಾಕ್ ಹಂತದಲ್ಲಿ ಪ್ರಕಟಿಸಿ ಶಿಕ್ಷಕರಿಂದ ಅಂತಿಮ ಆಕ್ಷೇಪಣೆಗಳನ್ನು ಆಹ್ವಾನಿಸುವುದು ಹಾಗೂ ಸ್ಥಳೀಯ ಪತ್ರಿಕಾ ಪ್ರಕಟಣೆ ನೀಡುವುದು. | 19-02-2013 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 4 | ಜಿಲ್ಲಾ/ಬ್ಲಾಕ್‌ಹಂತದಲ್ಲಿ ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | 05-03-2013 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |

| | | | |
|---|---|---|---|
| 5 | ಈ ರೀತಿ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ ಜಿಲ್ಲಾ ಹಂತದಲ್ಲಿ ಅಂತಿಮ ಜೇಷ್ಠತಾ ಪಟ್ಟಿ ಸಿದ್ದಪಡಿಸುವುದು. | 06-03-2013 ರಿಂದ 07-03-2013 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 6 | ಈ ರೀತಿ ಅಂತಿಮಗೊಳಿಸಿದ ಜೇಷ್ಠತಾ ಪಟ್ಟಿಯ ಸಾಫ್ಟ್ ಮತ್ತು ಹಾರ್ಡ್ ಪ್ರತಿಯನ್ನು ಉಪನಿರ್ದೇಶಕರು ಧೃಡೀಕರಿಸಿ ಸಂಬಂದಿಸಿದ ಪ್ರತ್ರಾಂಕಿತ ಸಹಾಯಕರು/ಅಧೀಕ್ಷಕರು/ವಿಷಯನಿರ್ವಾಹಕರೋರ್ವರನ್ನು ನಿಯೋಜಿಸಿ ಆಯುಕ್ತಾಲಯಕ್ಕೆ ಖುದ್ದು ಸಲ್ಲಿಸುವುದು. (ಯಾವುದೇ ವಿಳಂಬಕ್ಕೆ ಅನಕಾಶಕೊಡಬಾರದು) | ಬೆಂಗಳೂರು ವಿಭಾಗ 08-03-2013 ಮೈಸೂರು ವಿಭಾಗ 11-03-2013 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 7 | ಜಿಲ್ಲಾ ಉಪನಿರ್ದೇಶಕರಿಂದ ಸ್ವೀಕರಿಸಿದ ಅಂತಿಮ ಜೇಷ್ಠತಾ ಪಟ್ಟಿಯನ್ನು ಬೆಂಗಳೂರು ಆಯುಕ್ತವಾರು ಅಂತಿಮಗೊಳಿಸಿ ಸಂಯುಕ್ತೀಕರಿಸಿದ ಅಂತಿಮ ಜೇಷ್ಠತಾಪಟ್ಟಿಯನ್ನು ಪ್ರಕಟಿಸಿ ಅಧಿಸೂಚನೆ ಹೊರಡಿಸುವುದು. | 16-03-2013 | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| **ಭಾಗ-2 31-12-2007 ರಲ್ಲಿ ಅಂತಿಮಗೊಳಿಸಿದ ಜೇಷ್ಠತಾ ಪಟ್ಟಿಯಲ್ಲಿ ಬಿಟ್ಟುಹೋಗಿರುವ/ತಿದ್ದುಪಡಿ ಪ್ರಕರಣಗಳಿಗೆ ಉಪಜೇಷ್ಠತಾ ಸಂಖ್ಯೆಯನ್ನು ನೀಡಿ ಪ್ರಕಟಿಸುವುದರ ಕುರಿತು.** | | | |
| 1 | ಈಗಾಗಲೇ ಅಂತಿಮಗೊಳಿಸಲಾದ 31-12-2007 ರ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಪ್ರಕರಣಗಳನ್ನು ಜಿಲ್ಲಾ ಉಪನಿರ್ದೇಶಕರು ಸಲ್ಲಿಸಿರುವಂತೆ ಅಂತಿಮಗೊಳಿಸಿ ಉಪಜೇಷ್ಠತೆ ನೀಡಿ ಈ ಉಪಜೇಷ್ಠತಾ ಪಟ್ಟಿಯ ತಾತ್ಕಾಲಿಕ ಪಟ್ಟಿ ಪ್ರಕಟಿಸುವುದು ಹಾಗೂ ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಿವುದು. | 28-02-2013 | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ |
| 2 | ಈಗಾಗಲೇ ಅಂತಿಮಗೊಳಿಸಿದ 31-12-2007ರ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಪ್ರಕರಣಗಳಿಗೆ ಉಪಜೇಷ್ಠತೆಯನ್ನು ನೀಡಿ ಪ್ರಕಟಿಸಿದ ತಾತ್ಕಾಲಿಕ ಪಟ್ಟಿಗೆ ಸಂಬಂದಿಸಿದಂತೆ ಆಕ್ಷೇಪಣೆಗಳನ್ನು ಆಹ್ವಾನಿಸುವುದು. | 07-03-2013 ರವರೆಗೆ | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 3 | ಶಿಕ್ಷಕರಿಂದ ಸ್ವೀಕರಿಸಿದ ಅಥವಾ ಮೂಲ ದಾಖಲೆಗಳಿಂದ ಪರಿಶೀಲಿಸಿದಂತೆ ತಿದ್ದುಪಡಿ ಮಾಡಬೇಕಾದ ಆಕ್ಷೇಪಣೆಗಳನ್ನು ಸರಿಪಡಿಸಿ ಜೇಷ್ಠತಾ ಪಟ್ಟಿಯ ಸಾಫ್ಟ್ ಮತ್ತು ಹಾರ್ಡ್ ಪ್ರತಿಯನ್ನು ಉಪನಿರ್ದೇಶಕರು ಧೃಡೀಕರಿಸಿ ಸಂಬಂದಿಸಿದ ಪ್ರತ್ರಾಂಕಿತ ಸಹಾಯಕರು/ಅಧೀಕ್ಷಕರು/ವಿಷಯನಿರ್ವಾಹಕರೋರ್ವರನ್ನು ನಿಯೋಜಿಸಿ ಆಯುಕ್ತಾಲಯಕ್ಕೆ ಖುದ್ದು ಸಲ್ಲಿಸುವುದು. (ಯಾವುದೇ ವಿಳಂಬಕ್ಕೆ ಅನಕಾಶಕೊಡಬಾರದು) | ಬೆಂಗಳೂರು ವಿಭಾಗ 08-03-2013 ಮೈಸೂರು ವಿಭಾಗ 11-03-2013 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 4 | ಉಪನಿರ್ದೇಶಕರಿಂದ ಸ್ವೀಕರಿಸಿದ 31-12-2007 ರಲ್ಲಿ ಅಂತಿಮಗೊಳಿಸಲಾದ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಪ್ರಕರಣಗಳ ಅಂತಿಮ ಪಟ್ಟಿಯನ್ನು ಈ ಕಛೇರಿಯ ಹಂತದಲ್ಲಿ ಪರಿಶೀಲಿಸಿ ಅಂತಿಮಗೊಳಿಸಿ ಪ್ರಕಟಿಸುವುದು. | 16-03-2013 | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

ಮೇಲ್ಕಂಡಂತೆ ಕಡ್ಡಾಯವಾಗಿ ಕ್ರಮವಹಿಸಲು ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಚಿಸಿದೆ.

(ಎಂ.ಎನ್.ಬೇಗ್)
ನಿರ್ದೇಶಕರು (ಪ್ರೌಢಶಿಕ್ಷಣ)

12/2/13

ಇವರಿಗೆ

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು

1. ವಿಭಾಗೀಯ ಸಹ ನಿರ್ದೇಶಕರು , ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಮತ್ತು ಮೈಸೂರು ವಿಭಾಗ ಇವರಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ.
2. ಕಡತ ಪ್ರತಿ